ಭಾರತೀಯ ಜನತಾ ಪಾರ್ಟಿ

11, ಅಶೋಕ ರಸ್ತೆ, ನವದೆಹಲಿ - 110001

**Phone-011-23005700, Fax-011-23005787**

ದಿನಾಂಕ: ಜನವರಿ 29, 2013

**ಡೀಸೆಲ್‌ನ ದ್ವಿ ಬೆಲೆ ವ್ಯವಸ್ಥೆ ಕುರಿತು ಭಾಜಪ ರಾಷ್ಟ್ರೀಯ ವಕ್ತಾರ ಹಾಗೂ ಸಂಸದ ಶ್ರೀ ಪ್ರಕಾಶ್ ಜಾವ್ಡೇಕರ್ ಅವರ ಪತ್ರಿಕಾ ಪ್ರಕಟಣೆ**

**ಡೀಸೆಲ್‌ನ ಮೇಲೆ ದ್ವಿ ಬೆಲೆ ವ್ಯವಸ್ಥೆ ತರುವ ಮೂಲಕ ಜನಸಾಮಾನ್ಯರ ಮೇಲೆ ಹಿಂದೆಂದೂ ಕಾಣದ ಹೊರೆ ಹೇರಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಕ್ರಮವನ್ನು ಭಾಜಪ ಖಂಡಿಸುತ್ತದೆ. ಪರೋಕ್ಷವಾಗಿ ಬೆಲೆ ಹೆಚ್ಚಿಸುವ ಹುನ್ನಾರ ಇದಾಗಿದೆ.** ಡೀಸೆಲ್ ಉತ್ಪನ್ನಗಳ ಬೆಲೆಯನ್ನು ನಿಯಂತ್ರಣದಿಂದ ಮುಕ್ತಗೊಳಿಸಿದ ಸರ್ಕಾರ ಎರಡು ವರ್ಗಗಳ ಗ್ರಾಹಕರನ್ನು ಸೃಷ್ಟಿಸಿದೆ. ಅವರೆಂದರೆ, ಸಗಟು ಬಳಕೆದಾರರು ಹಾಗೂ ತೈಲ ಕಂಪನಿಗಳ ಚಿಲ್ಲರೆ ಮಳಿಗೆಗಳಲ್ಲಿ ತೈಲ ಖರೀದಿಸುವ ಗ್ರಾಹಕರು. ಚಿಲ್ಲರೆ ಮಳಿಗೆಗಳಲ್ಲಿ ತೈಲ ಖರೀದಿಸುವ ಗ್ರಾಹಕರು ಪ್ರತಿ ಲೀಟರಿಗೆ 50 ರಿಂದ 54 ರೂಪಾಯಿ ಪಾವತಿಸಿದರೆ, ಸಗಟು ಬಳಕೆದಾರರು ಪ್ರತಿ ಲೀಟರಿಗೆ 62 ರಿಂದ 65 ರೂಪಾಯಿ ತೆರಬೇಕಾಗಿದೆ. ಈ ಒಂದು ನಿರ್ಣಯದಿಂದ ರಾಜ್ಯ ಸಾರಿಗೆ ಸಂಸ್ಥೆಗಳು ಮೂರು ಸಾವಿರ ಕೋಟಿ ರೂಪಾಯಿಗಳ ಹೆಚ್ಚುವರಿ ಮೊತ್ತ ತೆರಬೇಕಿದೆ. ಅದೇ ರೀತಿ ರೈಲ್ವೆ ಇಲಾಖೆಯು ಸಹ ಈ ನಿರ್ಣಯದ ಬಿಸಿಯಿಂದ ತತ್ತರಿಸಿದ್ದು ಮೂರು ಸಾವಿರ ಕೋಟಿ ರೂಪಾಯಿ ಹೆಚ್ಚುವರಿ ಖರ್ಚಿನ ಹೊರೆ ಹೊರಬೇಕಿದೆ. ಸಾರ್ವಜನಿಕ ಉಪಯುಕ್ತ ಸೇವೆಗಳಾದ ನಗರ ಬಸ್ ಸೇವೆ ಮತ್ತು ಇತ್ತರೆ ಸಾರ್ವಜನಿಕ ಸೇವಾ ವಾಹನಗಳೂ ಸಹ ಮೂರು ಸಾವಿರ ಕೋಟಿ ಹೆಚ್ಚುವರಿ ಹಣ ನೀಡುವ ಸಂದಿಗ್ಧ ಸಂದರ್ಭ ಉದ್ಭವಿಸಿದೆ. ಖಾಸಗಿ ಕೈಗಾರಿಕೆಗಳು ಹಾಗೂ ಅನ್ಯ ವಾಣಿಜ್ಯ ಸಂಸ್ಥೆಗಳೂ ಸಹ ವಾರ್ಷಿಕ ಆರು ಸಾವಿರ ಕೋಟಿ ರೂಪಾಯಿ ಪಾವತಿಸಬೇಕಾಗಿದೆ. ಆದ ಕಾರಣ, ತನ್ನ ಒಂದೇ ಒಂದು ನಿರ್ಣಯದಿಂದ, ಸರ್ಕಾರ "ಸಗಟು ಖರೀದಿದಾರರು" ಎಂಬ ಹೊಸ ವರ್ಗ ಸೃಷ್ಟಿಸಿ 18 ಸಾವಿರ ಕೋಟಿ ರೂಪಾಯಿಗಳ ಹೊರೆ ಹೇರಿದೆ.

**ಈ ಎಲ್ಲಾ ಸೇವೆಗಳು ಹೆಚ್ಚಿನ ಖರ್ಚು ಎದುರಿಸುವುದರಿಂದ ಅದರ ಹೊರೆಯನ್ನು ಈಗಾಗಲೇ ಡೀಸೆಲ್ ಬೆಲೆಗಳ ಮಾಸಿಕ ಹೆಚ್ಚಳದಿಂದ ತತ್ತರಿಸಿರುವ ಸಾಮಾನ್ಯ ಜನರಿಗೆ ವರ್ಗಾಯಿಸಲಿದೆ. ಸರ್ಕಾರ ಡೀಸೆಲ್ ಬೆಲೆಗಳ ಮೇಲಿರುವ ನಿಯಂತ್ರಣವನ್ನು ಮುಕ್ತಗೊಳಿಸಿದ ನಂತರ ಶ್ರೀಸಾಮಾನ್ಯನ ಮೇಲೆ ಉಂಟಾಗುವ ಹೊರೆ ಸುಮಾರು 60 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಲಿದೆ.**

ಮೀನುಗಾರರನ್ನು ಸಹ ಸಗಟು ಬಳಕೆದಾರರ ಪಟ್ಟಿಗೆ ಸೇರಿಸಲಾಗಿದೆ. ಡೀಸಲ್ ವಿತರಣೆಯಲ್ಲಿ ಹೊಸ ನಿಯಮ ಜಾರಿಗೆ ಬಂದಾದ ನಂತರ ರೈತರೂ ಸಹ ಸಗಟು ಡೀಸೆಲ್ ಬಳಕೆದಾರರ ಪಟ್ಟಿಗೆ ಸೇರುವ ಪ್ರಮೇಯ ಉದ್ಭವಿಸಲಿದೆ.

**ದ್ವಿ ಬೆಲೆ ವ್ಯವಸ್ಥೆಯನ್ನು ತಕ್ಷಣ ಹಿಂಪಡೆದು ಡೀಸೆಲ್ ಚಿಲ್ಲರೆ ಬೆಲೆಗಳ ಏರಿಕೆ ಪ್ರತಿ ತಿಂಗಳು ಮರುಕಳಿಸದಂತೆ ವ್ಯವಸ್ಥೆ ಮಾಡಬೇಕು ಎಂದು ಭಾಜಪ ಆಗ್ರಹಿಸುತ್ತದೆ.**

**ತೆಲಂಗಾಣ ವಿಚಾರ**

ಪ್ರತ್ಯೇಕ ತೆಲಂಗಾಣ ರಾಜ್ಯ ರೂಪಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಯುಪಿಎ ಸರ್ಕಾರದ ನಡೆಯನ್ನು ಭಾಜಪ ಖಂಡಿಸುತ್ತದೆ. ಜನವರಿ 28, 2013ರ ವೇಳೆಗೆ ತೆಲಂಗಾಣ ರಾಜ್ಯ ನಿರ್ಮಿಸುವುದಾಗಿ ಆಶ್ವಾಸನೆ ಕೊಟ್ಟ ಸರ್ಕಾರ ಮಾತು ತಪ್ಪಿದೆ. ಡಿಸೆಂಬರ್ ತಿಂಗಳಲ್ಲಿ ನಡೆದ ಸರ್ವಪಕ್ಷ ಸಭೆಯ ನಂತರ ಕೇಂದ್ರ ಗೃಹ ಸಚಿವ ಸುಶೀಲ್ ಕುಮಾರ್ ಶಿಂಧೆಯವರು ಈ ಮಾತು ನೀಡಿದ್ದರು. ತೆಲಂಗಾಣ ಜನತೆಗೆ ದ್ರೋಹವಾಗಿರುವುದನ್ನು ಕದಾಪಿ ಒಪ್ಪಲಾಗದು.

ಪ್ರತ್ಯೇಕ ತೆಲಂಗಾಣ ರಾಜ್ಯ ನಿರ್ಮಿಸುವ ಪ್ರಕ್ರಿಯೆ ಆರಂಭವಾಗಿದೆ ಎಂದು ಕೇಂದ್ರ ಗೃಹ ಸಚಿವರಾಗಿದ್ದ ಪಿ.ಚಿದಂಬರಂ ಡಿಸೆಂಬರ್ 9,2009 ರಂದೇ ಘೋಷಿಸಿದ್ದರು. ಆದರೆ ಕಾಂಗ್ರೆಸ್ ಪಕ್ಷದ ರಾಜಕೀಯದಿಂದ ಆ ದಿವಸವೇ ಆ ಪ್ರಕ್ರಿಯೆಯನ್ನು ನಿಲ್ಲಿಸಲಾಯಿತು. ಐತಿಹಾಸಿಕವಾಗಿ, ಕಾಂಗ್ರೆಸ್ ಪಕ್ಷ ಶ್ರೀ ಚೆನ್ನಾರೆಡ್ಡಿಯವರ 1980ರ ಹೋರಾಟದ ಕಾಲದಿಂದಲೇ ತೆಲಂಗಾಣ ಜನತೆಯನ್ನು ವಂಚಿಸುತ್ತಾ ಬಂದಿದೆ.

ತೆಲಂಗಾಣ ರಾಜ್ಯ ನಿರ್ಮಿಸಬೇಕು ಎಂದು ಭಾಜಪ ನಿರಂತರವಾಗಿ ಹೇಳುತ್ತ ಬಂದಿದೆ. ಹೊಸ ರಾಜ್ಯದ ಘೋಷಣೆಯನ್ನು ಕೇಂದ್ರ ಸರ್ಕಾರ ತಕ್ಷಣ ಮಾಡಬೇಕು ಹಾಗೂ ಇದಕ್ಕಾಗಿ ಅಗತ್ಯ ಮಸೂದೆಯನ್ನು ಆಯವ್ಯಯ ಅಧಿವೇಶನದ ಮೊದಲ ವಾರದಲ್ಲೇ ಮಂಡಿಸಬೇಕು ಎಂದು ಇಂದು ನಾವು ಮತ್ತೊಮ್ಮೆ ಆಗ್ರಹಿಸುತ್ತೇವೆ. ಇಂತಹ ಮಸೂದೆಗೆ ಎನ್‌ಡಿಎ ಅಚಲ ಸಮರ್ಥನೆ ನೀಡಲು ಬದ್ಧವಾಗಿದೆ. ರಾಜ್ಯ ಅಸ್ತಿತ್ವಕ್ಕೆ ಬರಲಿ, ಇಲ್ಲವಾದರೆ, ಕಾಂಗ್ರೆಸ್ ಪಕ್ಷ ಭಾರಿ ರಾಜಕೀಯ ಬೆಲೆ ತೆರಬೇಕಾಗುತ್ತದೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ